ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8 ]
Total No. of Printed Pages : 8 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]
Total No. of Questions : 57 ]

**ಸಂಕೇತ ಸಂಖ್ಯೆ : 85-K**
**Code No. : 85-K**

**D**

**CCE PR**
**UNREVISED**

Question Paper Serial No. **50**

ಪ್ರಶ್ನೆ ಪತ್ರಿಕೆ ಸಂಖ್ಯೆ

TEAR HERE TO OPEN THE QUESTION PAPER
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here

# ವಿಷಯ : ಸಮಾಜ ವಿಜ್ಞಾನ

# Subject : SOCIAL SCIENCE

**(ಕನ್ನಡ ಭಾಷಾಂತರ / Kannada Version)**
**(ಹಳೆ ಪಠ್ಯಕ್ರಮ / Old Syllabus)**
**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

ದಿನಾಂಕ : 09. 04. 2020 ] [ Date : 09. 04. 2020

ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 9-30 A.M. to 12-45 P.M.

ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 57 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

I. **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $10 \times 1 = 10$

1. ಭಾರತದ ಉಕ್ಕಿನ ಮನುಷ್ಯ

   (A) ಮಹಾತ್ಮ ಗಾಂಧೀಜಿ

   (B) ಡಾ. ಬಿ.ಆರ್. ಅಂಬೇಡ್ಕರ್

   (C) ಸರ್ದಾರ್ ವಲ್ಲಭಬಾಯಿ ಪಟೇಲ್

   (D) ಜವಹರಲಾಲ್ ನೆಹರು

2. ಸ್ವಾತಂತ್ರ್ಯ ನಂತರವೂ ಪೋರ್ಚುಗೀಸರ ವಸಾಹತು ಕೇಂದ್ರವಾಗಿ ಉಳಿದ ಪ್ರಾಂತ್ಯ

   (A) ಪಾಂಡಿಚೇರಿ

   (B) ಗೋವಾ

   (C) ಕಾರೈಕಲ್

   (D) ಮಾಹೆ

3. ಭಾರತ–ಶ್ರೀಲಂಕಾ ಬಾಂಧವ್ಯ ಐತಿಹಾಸಿಕವಾದುದು. ಈ ಹೇಳಿಕೆಯನ್ನು ಪುಷ್ಟೀಕರಿಸುವ ಅಂಶ

   (A) ಭಾರತ ಈ ದೇಶದೊಂದಿಗೆ ಉತ್ತಮ ವ್ಯಾಪಾರ ಸಂಬಂಧ ಹೊಂದಿದೆ

   (B) ಭಾರತ ಎಲ್.ಟಿ.ಟಿ.ಇ.ರವರನ್ನು ಹಿಮ್ಮೆಟ್ಟಿಸುವಲ್ಲಿ ಮಿಲಿಟರಿ ಸಹಾಯ ನೀಡಿದೆ

   (C) ಬೌದ್ಧ ಧರ್ಮ ಭಾರತೀಯ ಭಿಕ್ಷುಗಳಿಂದ ಶ್ರೀಲಂಕಾದಲ್ಲಿ ಪಸರಿಸಲ್ಪಟ್ಟಿತು

   (D) ರಾಜಕೀಯ ಮತ್ತು ಆರ್ಥಿಕ ರಂಗದಲ್ಲಿ ಭಾರತ ಶ್ರೀಲಂಕಾದೊಂದಿಗೆ ಉತ್ತಮ ಬಾಂಧವ್ಯ ಹೊಂದಿದೆ

4. ವಿಶ್ವಸಂಸ್ಥೆಯ ಮಹಾ ಕಾರ್ಯದರ್ಶಿಯವರ ಅಧಿಕಾರದ ಅವಧಿ

(A) 3 ವರ್ಷಗಳು

(B) 4 ವರ್ಷಗಳು

(C) 5 ವರ್ಷಗಳು

(D) 6 ವರ್ಷಗಳು

5. ಸಾಮಾಜಿಕ ಸಾಮರಸ್ಯಕ್ಕೆ ಸಹಾಯಕವಾಗುವ ಅಂಶ

(A) ಕೋಮುವಾದ

(B) ವರ್ಣಭೇದ ನೀತಿ

(C) ಜಾತಿವಾದ

(D) ಶಿಕ್ಷಣ

6. ಈಶಾನ್ಯ ಮಾನ್ಸೂನ್ ಮಾರುತಗಳ ಕಾಲವನ್ನು 'ನಿರ್ಗಮನ ಕಾಲ' ಎಂದು ಕರೆಯಲು ಕಾರಣ

(A) ನೈರುತ್ಯ ಮಾನ್ಸೂನ್ ಮಾರುತಗಳು ಹೆಚ್ಚು ಒತ್ತಡದಿಂದಾಗಿ ಅಕ್ಟೋಬರ್ ತಿಂಗಳಿನಿಂದ ಹಿಮ್ಮೆಟ್ಟಲು ಪ್ರಾರಂಭ ಮಾಡುತ್ತದೆ

(B) ನವೆಂಬರ್ ತಿಂಗಳ ಅಂತ್ಯದ ವೇಳೆಗೆ ಮಾರುತಗಳು ಬೀಸುವುದನ್ನು ನಿಲ್ಲಿಸುತ್ತದೆ

(C) ಅಕ್ಟೋಬರ್ ತಿಂಗಳಲ್ಲಿ ಭಾರತದ ಉಪಖಂಡಗಳಲ್ಲಿ ಮಳೆ ಸುರಿದು ಉಷಾಂಶ ಕಡಿಮೆಯಾಗುತ್ತದೆ

(D) ಸೂರ್ಯನ ಕಿರಣಗಳು ದಕ್ಷಿಣ ಗೋಳಾರ್ಧದಲ್ಲಿ ಲಂಬವಾಗಿ ಬೀಳುತ್ತದೆ

7. ಭಾರತದಲ್ಲಿಯೇ ಅತ್ಯಂತ ದೊಡ್ಡದಾದ ವಿವಿಧೋದ್ದೇಶ ನದಿ ಕಣಿವೆ ಯೋಜನೆ

(A) ಭಾಕ್ರಾ–ನಂಗಲ್

(B) ಕೋಸಿ

(C) ದಾಮೋದರ

(D) ಹಿರಾಕುಡ್

8. ವಿತ್ತೀಯ ಕೊರತೆಗೆ ಕಾರಣ

(A) ಹೂಡಿಕೆ ಹಿಂತೆಗೆತ

(B) ಸರ್ಕಾರದ ಸಾಲ ಮರುಪಾವತಿ

(C) ಸರ್ಕಾರದ ಒಟ್ಟು ವೆಚ್ಚ ಹೆಚ್ಚು

(D) ಸರ್ಕಾರದ ಆದಾಯ ಹೆಚ್ಚು

9. ಚಾಲ್ತಿ ಖಾತೆ ವ್ಯಾಪಾರಸ್ಥರಿಗೆ ಸೂಕ್ತ, ಕಾರಣ

(A) ಈ ಖಾತೆಗೆ ಬ್ಯಾಂಕ್ ಬಡ್ಡಿ ಕೊಡುವುದಿಲ್ಲ

(B) ಇಲ್ಲಿ ಮಿತ ಠೇವಣಿಗಳ ಮರುಪಾವತಿ ಮತ್ತು ಬೇಡಿಕೆ ಠೇವಣಿಗಳು ಅಥವಾ ಉಪಸರ್ಗ ವ್ಯವಹಾರ ಸಾಧ್ಯ

(C) ಬ್ಯಾಂಕ್ ಈ ಖಾತೆಗೆ ಸೇವಾ ಶುಲ್ಕ ವಸೂಲಿ ಮಾಡುತ್ತದೆ

(D) ಹಣವನ್ನು ದಿನಕ್ಕೆ ಎಷ್ಟು ಬಾರಿಯಾದರೂ ತುಂಬಬಹುದು, ಹಿಂಪಡೆಯಬಹುದು

10. ಜಿಲ್ಲಾ ಕೈಗಾರಿಕಾ ಕೇಂದ್ರಗಳ ಸ್ಥಾಪನೆಯ ಉದ್ದೇಶ

(A) ಸ್ವಯಂ ಉದ್ಯೋಗ ಪ್ರೋತ್ಸಾಹಿಸಲು

(B) ನಗರ ಪ್ರದೇಶಗಳಲ್ಲಿ ಕೈಗಾರಿಕಗಳನ್ನು ಸ್ಥಾಪಿಸಲು

(C) ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳ ಆಡಳಿತ ಮತ್ತು ಸಮಗ್ರತೆಯನ್ನು ಕೇಂದ್ರೀಕರಿಸಲು

(D) ನಗರ ಪ್ರದೇಶಗಳಲ್ಲಿನ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು

II. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ *ಒಂದೊಂದು* ವಾಕ್ಯದಲ್ಲಿ ಉತ್ತರ ಬರೆಯಿರಿ :** $14 \times 1 = 14$

11. ಯುಗ ಎಂದರೇನು ?

12. ಲೋಕಾಯುಕ್ತ ಸ್ಥಾಪನೆಯ ಉದ್ದೇಶವೇನು ?

13. 1909 ಮಿಂಟೋ–ಮಾರ್ಲೆ ಸುಧಾರಣೆ ಭಾರತೀಯರನ್ನು ಪ್ರತ್ಯೇಕಿಸಿತು. ಹೇಗೆ ?

14. ವಿಶ್ವಸಂಸ್ಥೆಯ ದತ್ತಿ ಸಮಿತಿಯ ಕಾರ್ಯಕ್ಷೇತ್ರ ಕಡಿಮೆಯಾಗಿದೆ. ಏಕೆ ?

15. ಬಿಳಿ ಕ್ರಾಂತಿಯ ಪಿತಾಮಹ ಯಾರು ?

16. ಮೌನ ಕಣಿವೆ ಚಳುವಳಿ ಏಕೆ ನಡೆಸಲಾಯಿತು ?

17. 'ನಾಜಿ ಸಿದ್ಧಾಂತವು ಜರ್ಮನಿಯನ್ನು ಹಾಳು ಮಾಡಿತು.' ಹೇಗೆ ?

18. 'ಕೂಲಿಯಿಂದ ಶಾಲೆಗೆ' ಕಾರ್ಯಕ್ರಮದ ಉದ್ದೇಶವೇನು ?

19. ಭಾರತದಲ್ಲಿ ಬೆಳೆಯುವ ಎರಡು ಪ್ರಮುಖ ಪಾನೀಯ ಬೆಳೆಗಳನ್ನು ಹೆಸರಿಸಿ.

20. ಸಾಂದ್ರ ಬೇಸಾಯ ಎಂದರೇನು ?

21. ಕಲ್ಲಿದ್ದಲನ್ನು 'ಕಪ್ಪು ಬಂಗಾರ' ಎಂದು ಕರೆಯುವರು. ಏಕೆ ?

22. ಮಾಹಿತಿ ತಂತ್ರಜ್ಞಾನವನ್ನು ಜ್ಞಾನಾಧಾರಿತ ಕೈಗಾರಿಕೆ ಎಂದು ಏಕೆ ಕರೆಯುವರು ?

23. 'ಮಹಿಳಾ ಸಬಲೀಕರಣ.' ಇದನ್ನು ವ್ಯಾಖ್ಯಾನಿಸಿ.

24. ಡಾ. ಎಂ.ಎಸ್. ಸ್ವಾಮಿನಾಥನ್‌ರವರನ್ನು 'ಹಸಿರು ಕ್ರಾಂತಿಯ ಪಿತಾಮಹ' ಎನ್ನುವರು. ಏಕೆ ?

III. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ *ಎರಡರಿಂದ ನಾಲ್ಕು* ವಾಕ್ಯಗಳಲ್ಲಿ ಉತ್ತರಿಸಿ :** $25 \times 2 = 50$

25. ಮೂರನೇ ಆಂಗ್ಲೋ–ಮೈಸೂರು ಯುದ್ಧದ ಪರಿಣಾಮಗಳು ಯಾವುವು ?

26. "ಸಮುದ್ರಯಾನಕ್ಕೆ ವೈಜ್ಞಾನಿಕ ಬೆಳವಣಿಗೆ ಕಾರಣ." ಈ ಹೇಳಿಕೆಯನ್ನು ಸಮರ್ಥಿಸಿ.

27. ಆಲಿಘರ್ ಚಳುವಳಿಯ ಉದ್ದೇಶವೇನು ?

*ಅಥವಾ*

ರಾಮಕೃಷ್ಣ ಮಿಷನ್‌ನ ದೃಷ್ಟಿಕೋನವೇನು ?

28. ರಷ್ಯಾದಲ್ಲಿ ಲೆನಿನ್ ಕೈಗೊಂಡ ಸುಧಾರಣಾ ಕ್ರಮಗಳು ಯಾವುವು ?

29. ಪ್ರಾದೇಶಿಕ ವಾದವನ್ನು ವಿವರಿಸಿ.

30. ಮಣ್ಣಿನ ಸವೆತಕ್ಕೆ ಕಾರಣಗಳೇನು ?

31. ವಿಶ್ವದಾದ್ಯಂತ ಮಾನವ ಹಕ್ಕುಗಳ ಪ್ರತಿಪಾದನೆಯಲ್ಲಿ ಭಾರತದ ಪಾತ್ರವನ್ನು ವಿವರಿಸಿ.

32. ಭಾರತದ ಪರ್ಯಾಯ ಪ್ರಸ್ಥಭೂಮಿಯ ಆರ್ಥಿಕ ಪ್ರಾಮುಖ್ಯತೆಯನ್ನು ತಿಳಿಸಿ.

33. ಜನಮಂದೆಯನ್ನು ಉದಾಹರಣೆ ಸಹಿತ ವಿವರಿಸಿ.

34. ಅರಣ್ಯ ಸಂರಕ್ಷಿಸಲು ಕೈಗೊಂಡ ಕ್ರಮಗಳು ಯಾವುವು ?

35. 'ಜಿ.ಪಿ.ಎಸ್.' ಒಂದು ಮಾರ್ಗಸೂಚಿ. ಹೇಗೆ ?

36. ಪ್ರವಾಹಗಳಿಂದ ಉಂಟಾಗುವ ಪರಿಣಾಮಗಳೇನು ?

37. ಜನಸಂಖ್ಯಾ ಸ್ಫೋಟವು ಆರ್ಥಿಕ ಪ್ರಗತಿಯ ಮೇಲೆ ದುಷ್ಪರಿಣಾಮ ಬೀರುತ್ತದೆ. ಹೇಗೆ ?

38. ಮನುಷ್ಯನ ಆಯಸ್ಸನ್ನು ಹೆಚ್ಚಿಸಲು ಸಹಾಯಕವಾಗುವ ಅಂಶಗಳನ್ನು ಪಟ್ಟಿಮಾಡಿ.

39. ಜಾಗತೀಕರಣ ಜನರಿಗೆ ವಸ್ತುಗಳ ಆಯ್ಕೆಯಲ್ಲಿ ವಿಶಾಲತೆ ಕಂಡುಬರಲು ಸಹಕರಿಸುತ್ತದೆ. ಹೇಗೆ ?

40. ರೆಗ್ಯುಲೇಟಿಂಗ್ ಶಾಸನದ ಮುಖ್ಯಾಂಶಗಳನ್ನು ತಿಳಿಸಿ.

41. ಸಾರಿಗೆ ಮತ್ತು ಸಂಪರ್ಕದ ಬೆಳವಣಿಗೆಗಳು ಸ್ವಾತಂತ್ರ್ಯ ಚಳುವಳಿಗೆ ದಾರಿಮಾಡಿ ಕೊಟ್ಟಿತು. ಹೇಗೆ ?

42. ವಿಶ್ವಸಂಸ್ಥೆಯ ಉದ್ದೇಶಗಳನ್ನು ಹೆಸರಿಸಿ.

43. ಮಳೆಕೊಯ್ಲು ಇಂದು ಕಡ್ಡಾಯವಾಗಿದೆ. ಏಕೆ ?

44. ಭಾರತದ ಸ್ವಾತಂತ್ರ್ಯ ನಂತರ ದೇಶವು ಎದುರಿಸಿದ ಸಮಸ್ಯೆಗಳನ್ನು ಪಟ್ಟಿ ಮಾಡಿ.

45. ಬಾಲಕಾರ್ಮಿಕರ ಸಮಸ್ಯೆಯಿಂದಾಗುವ ಪರಿಣಾಮಗಳೇನು ?

46. ವರ್ಣಭೇದ ನೀತಿ ಜಗತ್ತಿನ ಯಾವ ರಾಷ್ಟ್ರದಲ್ಲಿಯೂ ಅನುಸರಿಸಬಾರದೆಂದು ಭಾರತ ಪ್ರತಿಪಾದಿಸಿದೆ. ಸಮರ್ಥಿಸಿ.

47. ಹತ್ತಿ ಬೆಳೆ ಬೆಳೆಯಲು ಬೇಕಾದ ಪೂರಕ ಅಂಶಗಳನ್ನು ತಿಳಿಸಿ.

48. ಸುಗ್ಗಿ ಪೂರ್ವ ತಂತ್ರಜ್ಞಾನ ಸುಗ್ಗಿ ನಂತರದ ತಂತ್ರಜ್ಞಾನಕ್ಕಿಂತ ಭಿನ್ನವಾಗಿದೆ. ಹೇಗೆ ?

49. ವಿಶ್ವ ವ್ಯಾಪಾರ ಸಂಘಟನೆಯ ಉದ್ದೇಶವೇನು ? ತಿಳಿಸಿ.

IV. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

50. ಬ್ರಿಟಿಷರು ಭಾರತದಲ್ಲಿನ ಶಿಕ್ಷಣ ಕ್ಷೇತ್ರದಲ್ಲಿ ಕೈಗೊಂಡ ಸುಧಾರಣೆಗಳು ಮಹತ್ತರವಾದುದು. ಹೇಗೆ ?

***ಅಥವಾ***

1857 ರ ದಂಗೆ ಭಾರತೀಯರ ಮೇಲೆ ಹಲವು ಪರಿಣಾಮಗಳನ್ನು ಬೀರಿತು. ಹೇಗೆ ?

51. ಭಾರತದ ವಿದೇಶಾಂಗ ನೀತಿಯ ಪ್ರಮುಖ ಉದ್ದೇಶಗಳನ್ನು ತಿಳಿಸಿ.

***ಅಥವಾ***

ರಷ್ಯಾದೊಂದಿಗೆ ಭಾರತದ ಸಂಬಂಧವನ್ನು ವಿವರಿಸಿ.

52. ರಸ್ತೆ ಸಾರಿಗೆಯ ತೊಡಕುಗಳ ಬಗ್ಗೆ ವಿವರಿಸಿ.

***ಅಥವಾ***

ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವಬೀರುವ ಅಂಶಗಳಾವುವು ?

53. ಅಸ್ಪೃಶ್ಯತಾ ನಿವಾರಣೆಯ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳಾವುವು ?

***ಅಥವಾ***

ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸಗಳಾವುವು ?

54. ಗ್ರಾಮೀಣಾಭಿವೃದ್ಧಿಯ ಮಹತ್ವವನ್ನು ವಿವರಿಸಿ.

*ಅಥವಾ*

ಸಾರ್ವಜನಿಕ ಹಣಕಾಸು ಮತ್ತು ವೈಯಕ್ತಿಕ ಹಣಕಾಸಿನ ನಡುವಿನ ವ್ಯತ್ಯಾಸ ತಿಳಿಸಿ.

55. ಬ್ಯಾಂಕ್ ಖಾತೆ ತೆರೆಯುವುದರಿಂದ ಆಗುವ ಅನುಕೂಲಗಳನ್ನು ತಿಳಿಸಿ.

*ಅಥವಾ*

ವಿಮಾ ಸಂಸ್ಥೆಗಳಿಂದಾಗುವ ಅನುಕೂಲಗಳನ್ನು ತಿಳಿಸಿ.

V. **ಈ ಕೆಳಗಿನ ಪ್ರಶ್ನೆಗೆ *ಎಂಟರಿಂದ ಹತ್ತು* ವಾಕ್ಯಗಳಲ್ಲಿ ಉತ್ತರಿಸಿ :** 4

56. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸ್‌ರ ಪಾತ್ರವನ್ನು ವಿವರಿಸಿ.

VI. 57. **ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :** $1 + 3 = 4$

a) $23\frac{1}{2}^{o}$ ಕರ್ಕಾಟಕ ಸಂಕ್ರಾಂತಿ ವೃತ್ತ

b) ಹಿರಾಕುಡ್ ಯೋಜನೆ

c) ಬಾಂಬೆ ಹೈ

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 57 ರ ಬದಲಿಗೆ)***

ಹಿಮಾಲಯ ಪರ್ವತದಿಂದಾಗುವ ಪ್ರಯೋಜನಗಳೇನು ? 4